## ಚುರುಕುತನದ ವ್ಯಾಪಾರ

ಗುಜರಾತಿ ವ್ಯಾಪಾರಿ ಬಾದಾಮಿ ಮಾರುತ್ತಿದ್ದ. ಅಲ್ಲಿಗೆ ಬಂದ ಸರ್ದಾರ್ಜಿ, 'ಇದನ್ನು ತಿನ್ನುವುದರಿಂದ ಏನು ಪ್ರಯೋಜನ?' ಎಂದು ಕೇಳಿದ. ವ್ಯಾಪಾರಿ, 'ಇದನ್ನು ತಿಂದರೆ ಬುದ್ಧಿ ಚುರುಕಾಗುತ್ತದೆ' ಎಂದ. ಸರ್ದಾಜಿ, 'ಅದ್ಹೇಗೆ?' ಎಂದು ಕೇಳಿದ. ವ್ಯಾಪಾರಿ, 'ಸರಿ, ಒಂದು ಕೆ.ಜಿ. ಅಕ್ಕಿಯಲ್ಲಿ ಎಷ್ಟು ಕಾಳುಗಳಿರುತ್ತವೆ ಹೇಳು?' ಎಂದ. ಸರ್ದಾರ್ಜಿ 'ಗೊತ್ತಿಲ್ಲ' ಎಂದ. ವ್ಯಾಪಾರಿ ಆತನಿಗೆ ತಿನ್ನಲು ಒಂದು ಬಾದಾಮಿ ಕೊಟ್ಟು, 'ಈಗ ಹೇಳು, ಒಂದು ಡಜನ್ ಬಾಳೆ ಹಣ್ಣಿನಲ್ಲಿ ಎಷ್ಟು ಹಣ್ಣುಗಳಿರುತ್ತವೆ?' ಎಂದ. ಆಗ ಸರ್ದಾರ್ಜಿ, 'ಹನ್ನೆರಡು' ಎಂದ. 'ಈಗ ಗೊತ್ತಾಯ್ತಾ? ಬಾದಾಮಿ ತಿಂದಾಗ ನಿನ್ನ ಬುದ್ಧಿ ಒಂದೇ ಕ್ಷಣದಲ್ಲಿ ಹೇಗೆ ಚುರುಕಾಯ್ತು?' ಎಂದ ವ್ಯಾಪಾರಿ. ಸರ್ದಾರ್ಜಿ ಒಂದು ಕೆ.ಜಿ. ಬಾದಾಮಿ ಖರೀದಿಸಿದ.

**ಅರವಿಂದ ಜಿ. ಜೋಷಿ**





ಕಲೆ: ಗಣೇಶ ಆಚಾರ್ಯ

## ನಾನೆಲ್ಲಿ ಮಾತಾಡಿದೆ?

ದಾರಿಯಲ್ಲಿ ನೀರಜ್‌ನನ್ನು ತಡೆದ ಟ್ರಾಫಿಕ್ ಪೊಲೀಸ್, 'ವಾಹನ ಚಲಾಯಿಸುವಾಗ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದುದಕ್ಕೆ ಫೈನ್ ಹಾಕಲಾಗಿದೆ, ತಗೊಳ್ಳಿ ನೋಟಿಸ್' ಎಂದು ಹೇಳಿದ. ನೀರಜ್, 'ನಾನೆಲ್ಲಿ ಮಾತನಾಡುತ್ತಿದ್ದೆ ಸರ್? ಮಾತನಾಡುತ್ತಿದ್ದುದು ನನ್ನ ಹೆಂಡತಿ. ನಾನು ಕೇಳಿಸಿಕೊಳ್ಳುತ್ತಿದ್ದೆ ಅಷ್ಟೆ. ಹೆಂಡತಿ ಮಾತನಾಡುವಾಗ ಯಾವ ಗಂಡ ತಾನೆ ಮಾತನಾಡುತ್ತಾನೆ, ನೀವೇ ಹೇಳಿ!' ಎಂದ.

**ವಿ. ಹೇಮಂತ ಕುಮಾರ್**